# UNIVERSITY OF AGRICULTURAL SCIENCES, DHARWAD

## KRISHI VIGYANA KENDRA

Saidapur Farm, Dharwad

Issue – 22, July-September 2013 Ph : 0836-2444272 e-mail : pc_kvkd@rediffmail.com website : www.kvkdharwad.org


## KRISHI MELA-2013




Krishi Mela 2013, the mega event of the University was conducted from 21st to 24th September 2013 to exhibit and popularize the agricultural technologies. The Krishi Mela was inaugurated by the Hon'ble Chief Minister Sri. Siddaramayya. The KVK scientists participated in various committees of Krishi Mela and showcased the latest technologies, varieties of different crops with live samples. Many farmers clarified their problems with the scientists. Totally 11.8 lakh people participated in the Krishi Mela.





The technological beneficiaries of KVK Dharwad Smt. Savitri Kempasannavar of Karidigudda village of Dharwad taluka and Sri. Basavaraj Kundagol of Marewad, Dharwad Tq and Dist. bagged Shreshta Krishi Mahile and Shreshta Krishika awards respectively.





During the Krishi Mela for the first time the taluka level best young farmer and young farm woman were identified and awarded from the seven districts of University jurisdiction. Shri. Mahamad Ali Isak and Smt. Yallavva Basappa Madar from Dharwad taluka, Shri. Suresh Sanganabasappa Meti and Smt. Rekha S. Ganiger from Navalgund taluk, Shri. Parashuram Basappa Jathar and Smt. Yashodha S. Sambhoji from Kundagol taluk were awarded Shreshta Yuva Krishika and Shreshta Yuva Krishimahile respectively from Dharwad district. Shri. Ashok M. Mutnal from Kalaghatagi taluk and Shri. Shiddanagaouda D. Patil from Hubli taluka were awarded Shreshta Yuva Krishika.

## 14$^{th}$ SAC Meeting

The 14th Scientific Advisory Committee meeting was conducted on 29-07-2013 under the Chairmanship of Hon'ble Vice Chancellor, Dr. H. S. Vijaykumar. Dr. L. Krishna Naik, Director of Extension, Dr. B. M. Khadi, Director of Research and Dr. Prabhukumar, Zonal Project Director, Zone-VIII, ICAR, Bengaluru and members of SAC were present on the occasion. Dr. J. S. Hilli, Programme Co-ordinator presented the details of Action taken on proceedings of previous meeting and the progress of KVK, Dharwad. All Scientists presented their work progress and action plan for the year.



## Visit of Dignitaries



Dr. Chandregouda, Principal Scientist, ZPD, Zone VIII Bengaluru.



Dr. G. R. Chintal , CGM NABARD, Bengaluru.



Moraco Scientists with Dr. S. A. Patil, Chairman, Krishi Mission, Govt. of Karnataka, Bengaluru.

## Field Days



Field day on Greengram (S-4) was conducted on 24-08-2013 in the field of Shri. Bairappa Dollin at Govanakoppa village of Dharwad taluka. Dr. K. P. Gundannavar, SMS (Entomology) gave information about IPM practices in Greengram and Dr. S. T. Hundekar, SMS (Soil Science) spoke about soil and water conservation. About 45 farmers and 8 farm women participated in the programme.

Field day on Blackgram (DU-1) was conducted on 29-08-2013 in the field of Shri. Nagaraj Ajjappa Betageri at Kanakur village of Dharwad taluka. Dr. S. G. Raju, SMS (Plant Pathology) and Dr. K. P. Gundannavar, SMS (Entomology) were the resource persons. About 35 farmers and 20 farm women participated in the programme.





Field day on Soybean (Dsb-21) was conducted on 07-09-2013 in the field of Shri. Ajit Jinnammanavar at B. Gudihal village of Kalaghatagi taluka. Dr. S. T. Hundekar, SMS (Soil Science) and Dr. S. G. Raju, SMS (Plant Pathology) participated as resource persons. About 44 farmers and 10 farm women participated in the programme.

## Training Programmes



The training programmes on "Crop technology" (19.08.2013 to 23-08-2013) and "Exposure Visits for training on technology in lead crops and activities" (04.09.2013 to 06.09.2013) were conducted at KVK, Dharwad under the sponsorship of NABARD. Dr. G. R. Chintal. CGM, NABARD, Bengaluru and Sri Mahadevaiah AGM, Dharwad were chief guests. Dr. J. S. Hilli Programme coordinator briefed about the taining programme. 20 representatives from selected Farmer clubs of Dharwad district participated and got benefited. Dr. Sarojani J. Karakannavar and Dr. S. G. Raju successfully conducted the training programmes.



The training programme on "FOCT-Palm Climbing and Plant Protection" (19.09.2013 to 24-09-2013) was conducted at KVK, Dharwad under the sponsorship of Coconut Development Board, Regional Office, Bengaluru. 20 trainees selected from Dharwad district participated in the training programme and got benefited. During training programme palm climbing devices were distributed to all participants free of cost. The training programme was conducted smoothly and successfully under the leadership of Dr. S. M. Hiremath, SMS (Horticulture).








The training programmes on preparation of Tomato products was conducted at KVK Dharwad on 13.09.2013. Twenty farmers and farm women from Dharwad district participated in the training programme. Dr. Sarojani J. Karakannavar. and Dr. Uma Kulkarni participated as resource persons and demonstrated preparation of Tomato Ketch up and pickle





The inaugural function of Dharwad taluka farmers club and training programme was conducted on 30.07.2013 by NABARD in collaboration with Paripoorna Grameen Abhivruddi Mahila Seva Samsthe, Dharwad at Vidyavardhaka Sangh Dharwad. Dr. Sarojani J. Karakannavar and Dr. S. T. Hundekar participated in the programme and delivered the lecture to the participants.

## Trainings for next trimester

### October -2013

- Pest management in Rabi crops
- Vegetable cultivation
- Management of nutrients in Rabi crops
- Ex trainees Sammelana –IFS

### November -2013

- Importance of Horticulture crops in IFS module
- Management of nutrients in Rabi crops
- Disease management in paddy
- Pest management in B.T cotton

### December -2013

- Phenyl making.
- Technical discussions and technology transfer to the facilitators of ATMA.
- Pest management in oil seeds

## Demonstration Units






The Off campus training programme on Integrated Farming System was conducted at Manasur village on 08.07.2013 in collaboration with Paripoorna Grameen Abhivruddi Mahila Seva Samsthe, Dharwad. Dr. Sarojani J. Karakannavar and Dr. S. T. Hundekar participated as resource person in the training programme. About 40 farm women participated in the training.

## Vocational training facilities at Krishi Vigyan Kendra, Dharwad and UAS, Dharwad

- Vermicomposting Unit
- Seed production in Flower crops
- Seed production on Field crops
- Nutrition garden
- Dairy Unit
- Poultry, Sheep and Goat rearing Unit
- Guava air layering
- Scion bank of fruit plants
- Budding and grafting technique in Rose
- Protected Cultivation
- Amla and custard apple farm
- Processed food products
- Income generating activities
- Bee keeping unit


Editor & Publisher : **Dr.Jitendra Kumar S.Hilli**
**Programme Co-ordinator**

Associate Editor : Dr. K. P. Gundannavar
SMS (Entomogy)

Dr. Sarojani J. Karakannavar
SMS (Home Science)

Dr. S.T.Hundekar
SMS (Soil Sci.)

Shri. Kumar. C. J
Farm Manager

Type Setting : Shri. Santosh B Kumbar


Toll Free Call : 1551 or 1800-180-1551(BSNL)
Telephone No. : 0836-2444272
Fax No. : 0836-2444272
Mobile : 94484 95342
**Web site : www.kvkdharwad.org**
**e-mail : pc_kvkd@rediffmail.com**


**www.aaqua.org Agriculture queries are answered through this website**

# ಕೃಷಿ ವಿಶ್ವವಿದ್ಯಾಲಯ, ಧಾರವಾಡ

## ಕೃಷಿ ವಿಜ್ಞಾನ ಕೇಂದ್ರ

ಸೈದಾಪೂರ ಫಾರ್ಮ, ಧಾರವಾಡ–05

**ಸಂಪುಟ 26 ಜುಲೈ–ಸಪ್ಟಂಬರ 2013,** Ph : 0836-2444272 **ಮಿಂಚಂಚೆ :** pc_kvkd@rediffmail.com **ಅಂತರ್ಜಾಲ :** www.kvkdharwad.org


## ಕೃಷಿ ಮೇಳ-2013




ಕೃಷಿ ವಿಶ್ವವಿದ್ಯಾಲಯದ 2013 ನೇ ಸಾಲಿನ ಕೃಷಿಮೇಳವನ್ನು ದಿನಾಂಕ 21 ರಿಂದ 24 ಸಪ್ಟಂಬರ 2013 ರವರೆಗೆ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ಸರಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ. ಸಿದ್ದರಾಮಯ್ಯನವರು ದೀಪ ಬೆಳಗಿಸುವದರ ಮೂಲಕ ಕೃಷಿಮೇಳಕ್ಕೆ ಚಾಲನೆ ನೀಡಿದರು. ಸುಮಾರು 11.8 ಲಕ್ಷ ಜನರು ಕೃಷಿ ಸಂಬಂಧಿತ ವಸ್ತು ಪ್ರದರ್ಶನವನ್ನು ವೀಕ್ಷಿಸುವುದರೊಂದಿಗೆ ಮಾಹಿತಿ ಪಡೆದರು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು, ಕೃಷಿ ಮೇಳದ ವಿವಿಧ ಸಮಿತಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುವದರೊಂದಿಗೆ ಹೊಸ ತಳಿಗಳು ಹಾಗೂ ಹೊಸ ತಂತ್ರಜ್ಞಾನದ ಮಾಹಿತಿಯನ್ನು ರೈತ ಸಮುದಾಯಕ್ಕೆ ನೀಡುವದರೊಂದಿಗೆ ವಿವಿಧ ಸಮಸ್ಯೆಗಳಿಗೆ ಪರಿಹಾರ ಸೂಚಿಸಿದರು.






ಧಾರವಾಡ ತಾಲೂಕು ಮರೇವಾಡ ಗ್ರಾಮದ ಪ್ರಗತಿಪರ ರೈತರಾದ ಶ್ರೀಯುತ ಬಸವರಾಜ ಕುಂದಗೋಳ ಹಾಗೂ ಧಾರವಾಡ ತಾಲೂಕು ಕರಡಿಗುಡ್ಡ ಗ್ರಾಮದ ಶ್ರೀಮತಿ ಸಾವಿತ್ರಿ ಕೆಂಪಸಣ್ಣವರ ಇವರು ಅನುಕ್ರಮವಾಗಿ ಶ್ರೇಷ್ಠ ಕೃಷಿಕ ಹಾಗೂ ಶ್ರೇಷ್ಠ ಕೃಷಿ ಮಹಿಳೆ ಪ್ರಶಸ್ತಿ ಪಡೆದು ಕೃಷಿಮೇಳದಲ್ಲಿ ಸನ್ಮಾನಿತಗೊಂಡರು.







ಇದೆ ಸಂದರ್ಭದಲ್ಲಿ ಮೊಟ್ಟಮೊದಲ ಬಾರಿಗೆ ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಏಳು ಜಿಲ್ಲೆಗಳ ಪ್ರತಿ ತಾಲೂಕಿನಿಂದ ಶ್ರೇಷ್ಠ ಯುವ ಕೃಷಿಕ ಹಾಗೂ ಶ್ರೇಷ್ಠ ಯುವ ಕೃಷಿಮಹಿಳೆ ಎಂಬ ಪ್ರಶಸ್ತಿಯನ್ನು ನೀಡಲಾಯಿತು. ಧಾರವಾಡ ಜಿಲ್ಲೆಯ ಧಾರವಾಡ ತಾಲೂಕಿನಿಂದ ಶ್ರೀ ಮಹಮದ ಅಲಿ ಇಸಾಕ್ ಮತ್ತು ಶ್ರೀಮತಿ ಯಲ್ಲವ್ವ ಬಸಪ್ಪ ಮಾದರ, ನವಲಗುಂದ ತಾಲೂಕಿನಿಂದ ಶ್ರೀ ಸುರೇಶ ಸಂಗನಬಸಪ್ಪ ಮೇಟಿ ಮತ್ತು ಶ್ರೀಮತಿ ರೇಖಾ ಶ. ಗಾಣಿಗೇರ, ಕುಂದಗೋಳ ತಾಲೂಕಿನಿಂದ ಶ್ರೀ ಪರುಶುರಾಮ ಬಸಪ್ಪ ಜಠಾರ ಮತ್ತು ಶ್ರೀಮತಿ ಯಶೋಧಾ ಶಿವಲಿಂಗಪ್ಪ ಸಂಭೋಜಿ, ಅನುಕ್ರಮವಾಗಿ ಶ್ರೇಷ್ಠ ಯುವ ಕೃಷಿಕ ಹಾಗೂ ಶ್ರೇಷ್ಠ ಯುವ ಕೃಷಿಮಹಿಳೆ ಪ್ರಶಸ್ತಿಯೊಂದಿಗೆ ಸನ್ಮಾನಿತಗೊಂಡರು. ಅದೇ ರೀತಿ ಕಲಘಟಗಿ ತಾಲೂಕಿನಿಂದ ಶ್ರೀ ಅಶೋಕ ಮಾರುತಿ ಮುತ್ನಾಳ ಹಾಗೂ ಹುಬ್ಬಳ್ಳಿ ತಾಲೂಕಿನಿಂದ ಶ್ರೀ ಸಿದ್ದನಗೌಡ ದ್ಯಾವನಗೌಡ ಪಾಟೀಲ್ ಶ್ರೇಷ್ಠ ಯುವ ಕೃಷಿಕ ಪ್ರಶಸ್ತಿಯೊಂದಿಗೆ ಸನ್ಮಾನಿತಗೊಂಡರು.

## 14 ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆ



14 ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯು ದಿನಾಂಕ 29.07.2013 ರಂದು ಕೃವಿವಿಯ ಕುಲಪತಿಗಳಾದ ಡಾ.ಹೆಚ್.ಎಸ್.ವಿಜಯಕುಮಾರ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ವಲಯ ಯೋಜನಾ ನಿರ್ದೇಶಕರಾದ ಡಾ. ಎಸ್. ಪ್ರಭುಕುಮಾರ, ವಿಸ್ತರಣಾ ನಿರ್ದೇಶಕರಾದ ಡಾ. ಎಲ್. ಕೃಷ್ಣ ನಾಯಕ, ಸಂಶೋಧನಾ ನಿರ್ದೇಶಕರಾದ ಡಾ ಬಿ. ಎಂ. ಖಾದಿ, ಇವರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ಸಂಯೋಜಕರಾದ ಡಾ. ಜೆ. ಎಸ್. ಹಿಳ್ಳಿಯವರು 13 ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯಲ್ಲಿ ಕೈಗೊಂಡ ನಡಾವಳಿಗಳ ಮೇಲಿನ ಪ್ರಗತಿ ಹಾಗೂ ಕೇಂದ್ರದ ಚಟುವಟಿಕೆಗಳ ವರದಿಯನ್ನು ಮಂಡಿಸಿದರು. ಕೃಷಿ ವಿಜ್ಞಾನ ಕೇಂದ್ರದ ಎಲ್ಲ ವಿಷಯ ತಜ್ಞರು ಕೈಗೊಂಡ ಕಾರ್ಯಕ್ರಮ ಹಾಗೂ ಕ್ರಿಯಾಯೋಜನೆ ಕುರಿತು ವರದಿ ಮಂಡಿಸಿದರು.

## ಕೇಂದ್ರಕ್ಕೆ ಗಣ್ಯರ ಭೇಟಿ



ಡಾ. ಚಂದ್ರೇಗೌಡ, ಪ್ರಧಾನ ವಿಜ್ಞಾನಿ, ವಲಯ ಯೋಜನಾಧಿಕಾರಿಗಳ ಕಛೇರಿ, ವಲಯ 8, ಬೆಂಗಳೂರು



ಡಾ. ಜಿ. ಆರ್. ಚಿಂತಾಲ. ಮುಖ್ಯ ಮಹಾಪ್ರಬಂಧಕರು, ಪ್ರಾದೇಶಿಕ ಕಛೇರಿ, ಬೆಂಗಳೂರು



ಡಾ. ಎಸ್. ಎ. ಪಾಟೀಲ. ಅಧ್ಯಕ್ಷರು, ಕೃಷಿ ಮಿಷನ್, ಕರ್ನಾಟಕ ಸರ್ಕಾರ ಇವರೊಂದಿಗೆ ಮೊರಾಕ್ಕೊ ವಿಜ್ಞಾನಿಗಳು

## ಕ್ಷೇತ್ರೋತ್ಸವಗಳು



ಧಾರವಾಡ ತಾಲೂಕಿನ ಗೋವನಕೊಪ್ಪ ಗ್ರಾಮದ ಪ್ರಗತಿಪರ ರೈತರಾದ ಶ್ರೀ ಬೈರಪ್ಪ ಡೊಳ್ಳಿನ ಇವರ ಹೊಲದಲ್ಲಿ ದಿನಾಂಕ 24.08.2013 ರಂದು ಹೆಸರು ಬೆಳೆ (S-4) ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರದ ಕೀಟಶಾಸ್ತ್ರಜ್ಞರಾದ ಡಾ. ಕೆ. ಪಿ. ಗುಂಡಣ್ಣವರ ಇವರು ಹೆಸರು ಬೆಳೆಯಲ್ಲಿ ಸಮಗ್ರ ಕೀಟ ನಿರ್ವಹಣೆ ಕುರಿತು ಹಾಗೂ ಡಾ. ಎಸ್. ಟಿ. ಹುಂಡೇಕರ (ವಿ. ತ. ಮಣ್ಣು ವಿಜ್ಞಾನ) ಇವರು ಮಣ್ಣು ಹಾಗೂ ನೀರಿನ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ 45 ರೈತ ಹಾಗೂ 8 ರೈತ ಮಹಿಳೆಯರು ಭಾಗವಹಿಸಿ ಇದರ ಸದುಪಯೋಗ ಪಡದುಕೊಂಡರು.

ದಿನಾಂಕ 29.08.2013 ರಂದು ಧಾರವಾಡ ತಾಲೂಕಿನ ಕನಕೂರು ಗ್ರಾಮದ ಶ್ರೀ ನಾಗರಾಜ ಅಜ್ಜಪ್ಪ ಬೆಟಗೇರಿ ಇವರ ಕ್ಷೇತ್ರದಲ್ಲಿ ಉದ್ದು ಬೆಳೆ (DU-1) ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಡಾ. ಎಸ್. ಜಿ. ರಾಜು (ವಿ. ತ. ರೋಗಶಾಸ್ತ್ರ) ಇವರು ಉದ್ದಿನ ಬೆಳೆಯಲ್ಲಿ ಸಮಗ್ರ ರೋಗ ನಿರ್ವಹಣೆ ಕುರಿತು ಹಾಗೂ ಕೀಟಶಾಸ್ತ್ರಜ್ಞರಾದ ಡಾ. ಕೆ. ಪಿ. ಗುಂಡಣ್ಣವರ ಇವರು ಕೀಟ ನಿರ್ವಹಣೆ ಕುರಿತು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ 35 ರೈತ ಹಾಗೂ 20 ರೈತ ಮಹಿಳೆಯರು ಭಾಗವಹಿಸಿ ಇದರ ಸದುಪಯೋಗ ಪಡದುಕೊಂಡರು.





ಕಲಘಟಗಿ ತಾಲೂಕಿನ ಬಿ.ಗುಡಿಹಾಳ ಗ್ರಾಮದ ಯುವರೈತ ಶ್ರೀ ಅಜಿತ ಜಿನ್ನಮ್ಮನವರ ಇವರ ಹೊಲದಲ್ಲಿ ದಿನಾಂಕ 07.09.2013 ರಂದು ಸೋಯಾಅವರೆ (Dsb-21) ಕ್ಷೇತ್ರೋತ್ಸವ ಏರ್ಪಡಿಸಲಾಗಿತ್ತು. ಡಾ. ಎಸ್. ಟಿ. ಹುಂಡೇಕರ (ಮಣ್ಣು ವಿಜ್ಞಾನಿ)ಹಾಗೂ ಡಾ. ಎಸ್. ಜಿ. ರಾಜು (ರೋಗಶಾಸ್ತ್ರ) ಇವರು ತಂತ್ರಜ್ಞಾನವನ್ನು ರೈತರಿಗೆ ವಿವರಿಸಿದರು. ಈ ಕಾರ್ಯಕ್ರಮದಲ್ಲಿ 44 ರೈತ ಹಾಗೂ 10 ರೈತ ಮಹಿಳೆಯರು ಉಪಸ್ಥಿತರಿದ್ದು ಇದರ ಸದುಪಯೋಗ ಪಡೆದುಕೊಂಡರು.

## ತರಬೇತಿ ಕಾರ್ಯಕ್ರಮಗಳು



ದಿನಾಂಕ 19.08.13 ರಿಂದ 23.08.13 ರವರೆಗೆ "ಪ್ರಮುಖ ಬೆಳೆಗಳ ತಂತ್ರಜ್ಞಾನ ಮತ್ತು ಚಟುವಟಿಕೆಗಳು" ಹಾಗೂ ದಿನಾಂಕ 04.09.13 ರಿಂದ 06.09.13 ರವರೆಗೆ "ಪ್ರಮುಖ ಬೆಳೆಗಳ ತಂತ್ರಜ್ಞಾನ ಮತ್ತು ಚಟುವಟಿಕೆಗಳ ಅಡಿಯಲ್ಲಿ ಕ್ಷೇತ್ರ ಬೇಟಿ" ತರಬೇತಿ ಕಾರ್ಯಕ್ರಮಗಳನ್ನು ನಬಾರ್ಡ ಪ್ರಾಯೋಜಕತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. ನಬಾರ್ಡನ ಕರ್ನಾಟಕ ಪ್ರಾದೇಶಿಕ ಕಛೇರಿಯ ಮುಖ್ಯ ಮಹಾಪ್ರಭಂದಕರಾದ ಡಾ. ಜಿ. ಆರ್. ಚಿಂತಾಲ ಹಾಗೂ ಶ್ರೀ ಮಹಾದೇವಯ್ಯ, ಸಹಾಯಕ ಮಹಾಪ್ರಭಂದಕರು ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ



ಆಗಮಿಸಿ ಉಪಯುಕ್ತ ಸಲಹೆಗಳನ್ನು ನೀಡಿದರು. ಧಾರವಾಡ ಜಿಲ್ಲೆಯ ಆಯ್ದ ರೈತಕೂಟಗಳಿಂದ 20 ಪ್ರತಿನಿಧಿಗಳು ಈ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು. ಕೇಂದ್ರದ ಮುಖ್ಯಸ್ಥರಾದ ಡಾ. ಜೆ. ಎಸ್. ಹಿಳ್ಳಿ, ತರಬೇತಿ ಕಾರ್ಯಕ್ರಮದ ವಿವರಗಳನ್ನು ನೀಡಿದರು. ಕೃಷಿ ವಿಜ್ಞಾನ ಕೇಂದ್ರದ ವಿಷಯ ತಜ್ಞರಾದ ಡಾ. ಸರೋಜನಿ. ಜೆ. ಕರಕಣ್ಣವರ ಹಾಗೂ ಡಾ. ಎಸ್. ಜಿ. ರಾಜು ಇವರು ಈ ತರಬೇತಿಯನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ತೆಂಗು ಅಭಿವೃದ್ಧಿ ಮಂಡಳಿಯ ಪ್ರಾಂತೀಯ ಕಛೇರಿ ಬೆಂಗಳೂರು, ಇವರ ಪ್ರಾಯೋಜಕತ್ವದಲ್ಲಿ ದಿನಾಂಕ 19.09.13 ರಿಂದ 24.09.13 ರವರೆಗೆ "ತೆಂಗಿನ ಮರ ಏರಿ ಹೆಡೆ ಶುಚಿಗೊಳಿಸುವ ಹಾಗೂ ಕಾಯಿ ಇಳಿಸುವ" ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಧಾರವಾಡ ಜಿಲ್ಲೆಯ ವಿವಿಧ ತಾಲೂಕುಗಳಿಂದ 20 ಪ್ರತಿನಿಧಿಗಳು ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು. ಪ್ರತಿ ಶಿಬಿರಾರ್ಥಿಗೆ "ತೆಂಗಿನ ಮರ ಏರುವ ಸಾಧನ"ವನ್ನು ಉಚಿತವಾಗಿ ನೀಡಲಾಯಿತು. ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಷಯ ತಜ್ಞರಾದ ಡಾ. ಎಸ್. ಎಂ ಹಿರೇಮಠ ಇವರು ಈ ತರಬೇತಿಯ ನೇತೃತ್ವ ವಹಿಸಿದ್ದರು








ದಿನಾಂಕ 13.09.2013 ರಂದು "ಟೊಮ್ಯಾಟೋ ಪದಾರ್ಥಗಳ ತಯಾರಿಕೆ" ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಸುಮಾರು 20 ಪ್ರತಿನಿಧಿಗಳು ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು. ಕೃಷಿ ವಿಜ್ಞಾನ ಕೇಂದ್ರದ ವಿಷಯ ತಜ್ಞರಾದ ಡಾ. ಸರೋಜನಿ. ಜೆ. ಕರಕಣ್ಣವರ ಹಾಗೂ ಡಾ. ಉಮಾ ಕುಲಕರ್ಣಿ, ವಿಸ್ತರಣಾ ನಿರ್ದೇಶನಾಲಯ, ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಟೊಮಾಟೋ ಕೆಚಪ್ ಹಾಗೂ ಉಪ್ಪಿನಕಾಯಿ ತಯಾರಿಕೆ ಪ್ರಾತ್ಯಕ್ಷಿಕೆ ಏರ್ಪಡಿಲಾಗಿತ್ತು.





ದಿನಾಂಕ 30.07.2013 ರಂದು ವಿದ್ಯಾವರ್ಧಕ ಸಂಘದಲ್ಲಿ ನಬಾರ್ಡ ಹಾಗೂ ಪರಿಪೂರ್ಣ ಗ್ರಾಮೀಣ ಅಭಿವೃದ್ಧಿ ಮಹಿಳಾ ಸೇವಾ ಸಂಸ್ಥೆ (ರಿ) ಧಾರವಾಡ ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಧಾರವಾಡ ತಾಲೂಕ ರೈತಕೂಟಗಳ ಉದ್ಘಾಟನೆ ಹಾಗೂ ತರಬೇತಿ ಶಿಬಿರದಲ್ಲಿ ಡಾ. ಸರೋಜನಿ. ಜೆ. ಕರಕಣ್ಣವರ, ಡಾ. ಎಸ್ ಟಿ. ಹುಂಡೇಕರ ಇವರುಗಳು ಭಾಗವಹಿಸಿ ಮಾಹಿತಿ ನೀಡಿದರು.

## ಮುಂಬರುವ ತ್ರೈಮಾಸಿಕದಲ್ಲಿ ಕೈಗೊಳ್ಳಲಾಗುವ ತರಬೇತಿ ಕಾರ್ಯಕ್ರಮಗಳು

### ಅಕ್ಟೋಬರ–2013

- ಹಿಂಗಾರು ಬೆಳೆಗಳಲ್ಲಿ ಕೀಟ ನಿರ್ವಹಣೆ
- ತರಕಾರಿ ಕೃಷಿ
- ಹಿಂಗಾರು ಬೆಳೆಗಳಲ್ಲಿ ಪೋಷಕಾಂಶಗಳ ನಿರ್ವಹಣೆ
- ತರಬೇತಿ ಪಡೆದ ಫಲಾನುಭವಿಗಳ ಸಭೆ

### ನವಂಬರ–2013

- ಸಮಗ್ರ ಕೃಷಿ ಪದ್ಧತಿಯಲ್ಲಿ ತೋಟಗಾರಿಕೆ ಬೆಳೆಗಳ ಪಾತ್ರ
- ಹಿಂಗಾರು ಬೆಳೆಗಳಲ್ಲಿ ಪೋಷಕಾಂಶಗಳ ನಿರ್ವಹಣೆ
- ಭತ್ತದ ಬೆಳೆಯಲ್ಲಿ ರೋಗಗಳ ಹತೋಟಿ
- ಬಿ.ಟಿ. ಹತ್ತಿಯಲ್ಲಿ ಕೀಟ ನಿರ್ವಹಣೆ

### ಡಿಸೆಂಬರ–2013

- ಫಿನೈಲ್ ತಯಾರಿಕೆ
- ಆತ್ಮಾ ಯೋಜನೆ ಅಧಿಕಾರಿಗಳೊಂದಿಗೆ ತಾಂತ್ರಿಕ ವಿಚಾರ ವಿನಿಮಯ
- ಎಣ್ಣೆಕಾಳು ಬೆಳೆಗಳಲ್ಲಿ ಕೀಟ ಹತೋಟಿ

**ಪ್ರಾತ್ಯಕ್ಷಿಕೆ ಘಟಕ**







ದಿನಾಂಕ 08.07.2013 ರಂದು ಮನಸೂರು ಗ್ರಾಮದಲ್ಲಿ ಪರಿಪೂರ್ಣ ಗ್ರಾಮೀಣ ಅಭಿವೃದ್ಧಿ ಮಹಿಳಾ ಸೇವಾ ಸಂಸ್ಥೆ (ರಿ) ಧಾರವಾಡ ಇವರು ಹಮ್ಮಿಕೊಂಡಿದ್ದ "ಸಮಗ್ರ ಕೃಷಿ ಪದ್ದತಿ" ಹೊರ ಆವರಣ ತರಬೇತಿಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಷಯ ತಜ್ಞರಾದ ಡಾ. ಸರೋಜನಿ. ಜೆ. ಕರಕಣ್ಣವರ ಮತ್ತು ಡಾ. ಎಸ್ ಟಿ. ಹುಂಡೇಕರ ಇವರುಗಳು ಭಾಗವಹಿಸಿ ಮಾಹಿತಿ ನೀಡಿದರು. ಸುಮಾರು 20 ಜನ ರೈತ ಮಹಿಳೆಯರು ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಕೃಷಿ ವಿಜ್ಞಾನ ಕೇಂದ್ರ, ಸೈದಾಪೂರ ಫಾರ್ಮ ಹಾಗೂ ಕೃ.ವಿ.ವಿ, ಧಾರವಾಡದಲ್ಲಿ ಔದ್ಯೋಗಿಕ ತರಬೇತಿ ಸೌಲಭ್ಯಗಳು

- ಎರೆಹುಳ ಗೊಬ್ಬರ ತಯಾರಿಕೆ ಘಟಕ
- ಹೂ ಬೆಳೆಯ ಬೀಜೋತ್ಪಾದನೆ
- ಬೀಜೋತ್ಪಾದನೆಯ ತಾಕುಗಳು
- ಕೈ ತೋಟ
- ಹೈನುಗಾರಿಕೆ ಘಟಕ
- ಕುರಿ, ಆಡು ಮತ್ತು ಕೋಳಿ ಸಾಕಾಣಿಕೆ ಘಟಕ
- ಪೇರಲ ಸಸಿ ತಯಾರು ಮಾಡಲು ತಾಯಿ ಮರಗಳು
- ಮಾವು, ಚಿಕ್ಕು ಬೆಳೆಯಲ್ಲಿ ಕಸಿ ಕಟ್ಟುವ ತರಬೇತಿಗಾಗಿ ತಾಯಿ ಮರಗಳು
- ಗುಲಾಬಿ ಸಸಿ ತಯಾರಿಕೆಯ ಪ್ರಾತ್ಯಕ್ಷಿಕೆ
- ಹಸಿರು ಮನೆ, ಪಾಲಿಹೌಸ್ ಬೇಸಾಯ
- ನೆಲ್ಲಿ ಹಾಗೂ ಸೀತಾಫಲ ತೋಟ
- ಸಂಸ್ಕರಿಸಿದ ಆಹಾರ ಪದಾರ್ಥಗಳು
- ಆದಾಯ ಉತ್ಪನ್ನ ಚಟುವಟಿಕೆಗಳು
- ಜೇನು ಸಾಕಾಣಿಕೆ ಘಟಕ


| | | |
|---|---|---|
| ಸಂಪಾದಕರು ಹಾಗೂ ಪ್ರಕಾಶಕರು | : | ಡಾ. ಜಿತೇಂದ್ರಕುಮಾರ ಎಸ್. ಹಿಳ್ಳಿ<br>ಕಾರ್ಯಕ್ರಮ ಸಂಯೋಜಕರು |
| ಸಹ ಸಂಪಾದಕರು | : | ಡಾ.ಎಸ್. ಟಿ. ಹುಂಡೆಕರ<br>ವಿಷಯ ತಜ್ಞರು (ಮಣ್ಣು ವಿಜ್ಞಾನ) |
| | | ಡಾ. ಕೆ. ಪಿ. ಗುಂಡಣ್ಣವರ<br>ವಿಷಯ ತಜ್ಞರು (ಕೀಟಶಾಸ್ತ್ರ)<br>ಶ್ರೀ. ಕುಮಾರ. ಸಿ. ಜೆ<br>ಕ್ಷೇತ್ರ ವ್ಯವಸ್ಥಾಪಕರು |
| ಅಕ್ಷರ ಜೋಡಣೆ | : | ಶ್ರೀ ಸಂತೋಷ ಕುಂಬಾರ |
| ಉಚಿತ ದೂರವಾಣಿ | : | 1551 (ಬಿಎಸ್ಎನ್ಎಲ್) |
| ದೂರವಾಣಿ ಸಂಖ್ಯೆ | : | 0836 -2444272 |
| ಫ್ಯಾಕ್ಸ್ | : | 0836 -2444272 |
| ಮೊಬೈಲ್ ಸಂಖ್ಯೆ | : | 9448495342 |
| ಅಂತರ್ಜಾಲ | : | www.kvkdharwad.org |
| ಮಿಂಚಂಚೆ | : | pc_kvkd@rediffmail.com |


**www.aaqua.org ಮುಖಾಂತರ ಕೃಷಿ ಪ್ರಶ್ನೆಗಳಿಗೆ ಉತ್ತರ ಪಡೆಯಿರಿ**